150

ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು.	ಚಾಲ್ತಿ.	
ಅಕ್ಕಿ	ರೂಪಾಯಿಗೆ	7	6 ರಿಂದ 6½ರ ವರಿಗೆ	ಸೇರುಗಳು.
ರಾಗಿ	,,	19	14 ರಿಂದ 15ರ ವರಿಗೆ	,,

ವ್ಯವಸಾಯ ಕೆಲಸಗಳು—ರಾಗಿ, ಜೋಳ, ಅವರೆ, ಇವುಗಳ ಬಿತ್ತನೆ.

ಧನಗಳು ಬಳ್ಳೀ ಸ್ಥಿತಿಯಲ್ಲಿವೆ. ನೀರೂ, ಹುಲ್ಲೂ ಸಾಕು.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಬಿತ್ತುವದಕ್ಕಾಗಿ ಭೂಮಿಯನ್ನು ತಯಾರ್ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಉಳುವುದು ಇನ್ನೂ ನಡಿಯುತ್ತಲಿದೆ.

ನಿಂತಿರುವ ಪೈರುಗಳು ಬಳ್ಳೀ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಕೆಲವು ಭಾಗಗಳಲ್ಲಿ ಅವರೆ, ರಾಗಿ, ಪುಣಜೆ ಭತ್ತ, ಎಳ್ಳು, ಇವುಗಳು ಬಿತ್ತಲ್ಪಟ್ಟವೆಯೆಂದು ರಿಪೋರ್ಟಾಗಿದೆ.

ಕುಯ್ಯಲಾದ ಪೈರು—ಹೊಸಕೋಟೆ, ದೇವನಹಳ್ಳಿ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ವೈಶಾಖಿ ಭತ್ತವು ಕುಯ್ಯಲಾಗಿದೆಯೆಂದು ರಿಪೋರ್ಟಾಗಿದೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕು.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊಸಕೋಟೆ ತಾಲ್ಲೂಕಿನಲ್ಲಿ ಓರೋಹಳ್ಳಿಯಿಂದ 3-ಕಾಲರಾ ಕೇಸುಗಳು ರಿಪೋರ್ಟಾಗಿದೆ.

12. ಧನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಉಳುವದು ಮುಗಿಯುತ್ತಾ ಬಂದಿದೆ.

ನಿಂತಿರುವ ಪೈರುಗಳ ಸ್ಥಿತಿಯು ಚೆನ್ನಾಗಿದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಕೋಲಾರ, ಬೌರಿಂಗ್‌ಪೇಟೆ, ಮಾಲೂರು, ಈ ತಾಲ್ಲೂಕುಗಳಲ್ಲಿ ಕಾರ್ತೀಕ ಭತ್ತ; ಬೌರಿಂಗ್‌ಪೇಟೆ, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಬಾಗೇಪಲ್ಲಿ, ಗೋರೀಬಿದನೂರು, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ರಾಗಿ; ಚಿಂತಾಮಣಿ ತಾಲ್ಲೂಕಿನಲ್ಲಿ ಬಲ್ಲರ್; ಮುಳಬಾಗಲು, ಚಿಕ್ಕಬಳ್ಳಾಪುರ, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ಸಾವೆ; ಮುಳಬಾಗಲು, ಬಾಗೇಪಲ್ಲಿ, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ಹಾರಕ; ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೋರೀಬಿದನೂರು, ಶ್ರೀನಿವಾಸಪುರ, ಈ ತಾಲ್ಲೂಕುಗಳಲ್ಲಿ ಅವರೆ.

ಕುಯ್ಯಲಾದ ಪೈರುಗಳು—ಶಿಡ್ಲಘಟ್ಟ, ಚಿಕ್ಕಬಳ್ಳಾಪುರ, ಗೋರೀಬಿದನೂರು, ಶ್ರೀನಿವಾಸಪುರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ವೈಶಾಖಿ ಭತ್ತ.

ವೈಶಾಖಿಭತ್ತದ ಆಗಬಹುದಾದ ಉತ್ಪತ್ತಿ—8 ಆಣೆಯಿಂದ 12 ಆಣೆ ವರಿಗೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಬೌರಿಂಗ್‌ಪೇಟೆ ತಾಲ್ಲೂಕಿನ ರಾಬರ್ಟ್‌ಸನ್‌ಪೇಟೆ, ಮತ್ತು ಉರಿಗಂ ಇವುಗಳಲ್ಲಿ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳು, ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಧನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಉಳುವದು ಮತ್ತು ಬಿತ್ತುವದು.

ನಿಂತಿರುವ ಪೈರುಗಳ ಸ್ಥಿತಿಯು ಚೆನ್ನಾಗಿದೆ, ಆದರೆ, ಮದ್ದಗಿರಿ, ಕೇರ್ಗ, ತಿಪಟೂರು, ಪಾವಗಡ, ಇವುಗಳ ಕೆಲವು ಭಾಗಗಳಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿದೆ.

ಬಿತ್ತನೆಯಾದ ಪೈರುಗಳು—ಮದ್ದಗಿರಿ, ಗುಬ್ಬಿ, ತಿಪಟೂರು, ತುರುವೇಕೆರೆ, ಇವುಗಳಲ್ಲಿ ಭತ್ತ; ಮದ್ದಗಿರಿ, ಚಿಕ್ಕನಾಯಕನಹಳ್ಳಿ, ತಿಪಟೂರು, ಕೊರ್ಟಗೆರೆ, ಇವುಗಳಲ್ಲಿ ರಾಗಿ; ಮದ್ದಗಿರಿ, ಗುಬ್ಬಿ, ತಿಪಟೂರು, ಇವುಗಳಲ್ಲಿ ಜೋಳ; ಚಿಕ್ಕನಾಯನಹಳ್ಳಿ, ಮದ್ದಗಿರಿ, ಇವುಗಳಲ್ಲಿ ಅವರೆ; ಮದ್ದಗಿರಿ, ಚಿಕ್ಕನಾಯ್ಕನಹಳ್ಳಿ, ಗುಬ್ಬಿ, ಕೊರ್ಟಗೆರೆ, ಇವುಗಳಲ್ಲಿ ಹರಳು; ಮದ್ದಗಿರಿ, ಚಿಕ್ಕನಾಯ್ಕನಹಳ್ಳಿ, ಇವುಗಳಲ್ಲಿ ತೊಗರಿ; ಮದ್ದಗಿರಿ, ಗುಬ್ಬಿ, ಕೊರ್ಟಗೆರೆ, ಇವುಗಳಲ್ಲಿ ಹಾರಕ; ಗುಬ್ಬಿಯಲ್ಲಿ ನೆಲಗಡಲೇಕಾಯಿ; ಪಾವಗಡದಲ್ಲಿ ನವಣೆ, ಸಜ್ಜೆ, ಮತ್ತು ತೊಗರಿ, ಹೆಸರು, ಮುಂತಾದ ಬೆಳೆಯ ಧಾನ್ಯಗಳು; ಕುಣಿಗಲ್ಲು ಮತ್ತು ತುರುವೇಕೆರೆ, ಇವುಗಳಲ್ಲಿ ಕಬ್ಬು; ಮದ್ದಗಿರಿಯಲ್ಲಿ ಸಾವೆ; ಮದ್ದಗಿರಿ ಮತ್ತು ತಿಪಟೂರು, ಇವುಗಳಲ್ಲಿ ಹುರುಳಿ, ಕಡಲೆ ಮುಂತಾದುವುಗಳು.

ಕುಯ್ಯಲಾದ ಪೈರುಗಳು—ಮದ್ದಗಿರಿ, ತೀರ್ಥ, ಪಾವಗಡ, ಕೊರ್ಟಗೆರೆ ಇವುಗಳು ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ, ಭತ್ತ; ಪಾವಗಡದಲ್ಲಿ ಅರಳಿ; ಕುಣಿಗಲ್ಲಿನಲ್ಲಿಲ್ಲಿ ಕಬ್ಬು.

10. ಕಾಲದ ಆಯತಿಯು ಚೆನ್ನಾಗಿದೆ.

11. ಪಾವಗಡ ತಾಲ್ಲೂಕಿನ ಗುಮ್ಮಘಟ್ಟದಲ್ಲಿ ಕಾಲರಾ ಸುರು ಆಗಿರುವದು ಹೊರ್ತು, ಡಿಸ್ಟ್ರಿಕ್ಟಿನಲ್ಲಿ ಜನಾರೋಗ್ಯ ಚೆನ್ನಾಗಿದೆ ಇದನ್ನು ನಿಲ್ಲಿಸುವದಕ್ಕೆ ಬೇಕಾದ ಏರ್ಪಾಡುಗಳನ್ನೂ ತೆಗದುಕೊಳ್ಳುತ್ತಿದ್ದಾರೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಎಡತೊರೆ, ಗುಂಡ್ಲುಪೇಟೆ, ನಂಜನಗೂಡು, ಮಳವಳ್ಳಿ, ಕೃಷ್ಣರಾಜಪೇಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭೂಮಿಯನ್ನು ಉತ್ತು, ಸಾಗುವಳಿಗೆ ತಯಾರ್ಮಾಡುತ್ತಾ ಇದ್ದಾರೆ. ಎಡತೊರೆ-ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಯಾವವಂದರೆ, ಜೋಳ, ಎಳ್ಳು, ಕಬ್ಬು, ಉಪ್ಪುನೇರಳಿ, ಹರಳು, ಕಾರ್ಭತ್ತ, ಉದ್ದು, ಹೆಸರು, ಮುಂತಾದವುಗಳು, ನಂಜನಗೂಡು ತಾಲ್ಲೂಕಿನ ದೊಡ್ಡ ಕಾಲಂಬಿ ಹೋಬಳಿಯ ಕೆಲವು ಗ್ರಾಮಗಳಲ್ಲಿ ಹೊರ್ತು ಮಿಕ್ಕ ಎಲ್ಲಾ ತಾಲ್ಲೂಕುಗಳಲ್ಲಿಯೂ ಚೆನ್ನಾಗಿನೆಯೆಂದು ರಿಪೋರ್ಟಾಗಿದ್ದೆ.

ಬಿತ್ತನೆಯಾದ ಪೈರುಗಳು—ನಂಜನಗೂಡಿನ ಕೆಲವು ಭಾಗಗಳಲ್ಲಿ ಭತ್ತವನ್ನೂ ಮತ್ತು, ರಾಗಿಯನ್ನೂ ಬಿತ್ತುತ್ತಿದ್ದಾರೆ.

ಕುಯ್ಯಲಾದ ಪೈರುಗಳು—ಕೃಷ್ಣರಾಜಪೇಟೆಯ ಕೆಲವು ಭಾಗಗಳಲ್ಲಿ ಕಬ್ಬನ್ನೂ ಕುಯ್ಯುತ್ತಿದ್ದಾರೆ, ಮತ್ತು ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಅಲೆ ಆಡುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಮೈಸೂರು, ಶ್ರೀರಂಗಪಟ್ಟಣ, ಹುಣಸೂರು, ಗುಂಡ್ಲುಪೇಟೆ, ನಂಜನಗೂಡು, ಮಳವಳ್ಳಿ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ನಿಂತಿರುವ ಪೈರುಗಳಿಗೆ ಮಳೆಯು ಅತ್ಯಾವಶ್ಯಕವಾಗಿ ಬೇಕಾಗಿದೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ; ಆದರೆ, ಎಡತೊರೆ, ಹೆಗ್ಗಡದೇವನಕೋಟೆ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಕಾಲರಾ ಇರುತ್ತಿದೆ

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಎಲ್ಲಾ ಕಡೆಯಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ, ಆದರೆ ನಂಜನಗೂಡು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಸಾಕಾಗಿಲ್ಲವೆಂದು ರಿಪೋರ್ಟಾಗಿದೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸ—ಹಾಸನ ತಾಲ್ಲೂಕಿನಲ್ಲಿ ಕಳೆ ಕೀಳುವ ಕೆಲಸವು ನಡಿಯುತ್ತಿದೆ. ಹಾಸನ, ಮಂಜರಾಬಾದ್ ಈ ತಾಲ್ಲೂಕುಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರು—ಯಾವವಂದರೆ, ಮಂಜರಾಬಾದ್ ಮತ್ತು ಬೇಲೂರು ಈ ತಾಲ್ಲೂಕುಗಳಲ್ಲಿ ಭತ್ತ ಮತ್ತು ರಾಗಿ; ಹಾಸನ, ಅರಕಲ್‌ಗೂಡು, ಹೊಳೇನರಸೀಪುರ, ಈ ತಾಲ್ಲೂಕುಗಳಲ್ಲಿ ರಾಗಿ, ತೊಗರಿ, ಅವರೆ, ಹರಳು, ಜೋಳ ಮತ್ತು ಭತ್ತ; ಚನ್ನರಾಯಪಟ್ಟಣ, ಅರಕಲ್‌ಗೂಡು, ಈ ತಾಲ್ಲೂಕುಗಳಲ್ಲಿ ಭತ್ತ ಮತ್ತು ಕಬ್ಬು; ಇವುಗಳು ಬಳ್ಳೀ ಸ್ಥಿತಿಯಲ್ಲಿವೆ. ಡಿಸ್ಟ್ರಿಕ್ಟಿನ ಸುವಾರು ಎಲ್ಲಾ ಭಾಗಗಳಲ್ಲಿಯೂ ಖುಷ್ಕೀ-ಪೈರುಗಳಿಗೆ ಮಳೆಯು ಹೆಚ್ಚಾಗಿ ಬೇಕಾಗಿದೆ.

ಬಿತ್ತನೆಯಾದ ಪೈರುಗಳು—ಹಾಸನದ ತಾಲ್ಲೂಕಿನಲ್ಲಿ ಭತ್ತವನ್ನೂ ಬಿತ್ತುತ್ತಿದ್ದಾರೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜೀನಸು ಸಿಕ್ಕುತ್ತವೆ.

11. ಬೇಲೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಪ್ಲೇಗೂ, ಅರಕಲ್‌ಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಾಲರಾವೂ, ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಕಿಡುಬೂ ಮತ್ತು ಛಳಿ ಜ್ವರವೂ, ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಬಳ್ಳೀ ಸ್ಥಿತಿಯಲ್ಲಿವೆ. ನೀರೂ, ಮೇವೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಶಿವಮೊಗ್ಗ, ಸಾಗರ, ನಗರ, ಈ ತಾಲ್ಲೂಕುಗಳಲ್ಲಿ ಬಿತ್ತನೆ ಕೆಲಸಗಳು ಸ್ವಲ್ಪ ಕಡಮೆ ಸಂಪೂರ್ಣವಾಗಿ ಮುಗಿದು ಇವೆ. ಡಿಸ್ಟ್ರಿಕ್ಟಿನ ಮಲನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನೂ ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು ಯಾವವಂದರೆ, ಭತ್ತ, ರಾಗಿ, ಕಬ್ಬು, ಇವುಗಳು ಬಳ್ಳೀ ಸ್ಥಿತಿಯಲ್ಲಿವೆ.

ಬಿತ್ತನೆಯಾದ ಪೈರುಗಳು—ಜೋಳ, ಹೆಸರು, ಅವರೆ, ಇವುಗಳು ಬಿತ್ತಲ್ಪಟ್ಟವೆ.

10. ಕಾಲದ ಆಯತಿಯು ಚೆನ್ನಾಗಿದೆ. ಸಾಕಾದಷ್ಟು ಆಹಾರ ಜೀನು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ ಚೆನ್ನಗಿರಿ, ಹೊನ್ನಾಳಿ, ಶಿಕಾರಿಪುರ, ನಗರ, ಈ ತಾಲ್ಲೂಕುಗಳಲ್ಲಿ ಸಿಡುಬು ಇದ್ದುಕೊಂಡು ಇದೆ.

12. ದನಗಳು ಆರೋಗ್ಯವಾಗಿವೆ. ಆದರೆ ಸೊರಬ ಮತ್ತು ನಾಗರ, ಈ ತಾಲ್ಲೂಕುಗಳಲ್ಲಿ ಗೋಮಾರೀ ರೋಗವು ಇರುತ್ತಿದೆ. ಹುಲ್ಲೂ, ಮೇವೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ತರೀಕೆರೆ, ಕಡೂರು, ಎಡೇಹಳ್ಳಿ, ಕೊಪ್ಪ, ಚಿಕ್ಕಮಗಳೂರು, ಇವುಗಳಲ್ಲಿ ಕಬ್ಬು; ಕೊಪ್ಪದಲ್ಲಿ ಅಡಿಕೆ, ಕಾಫಿ ಮತ್ತು ಯಾಲಕ್ಕಿ; ಚಿಕ್ಕಮಗಳೂರು ಮತ್ತು ಕಡೂರಿನಲ್ಲಿ ಗಿಡ್ಡ ರಾಗಿ, ಎಳ್ಳು, ಮತ್ತು ಭತ್ತವುಂತಾದುವುಗಳು; ಮೂಡಗೆರೆಯಲ್ಲಿ ರಾಗಿ ಮತ್ತು ಭತ್ತ; ಇವುಗಳೆಲ್ಲವು ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ತರೀಕೆರೆಯಲ್ಲಿ ಭತ್ತ, ರಾಗಿ, ಹುರುಳಿ ಮತ್ತು ಹರಳು; ಚಿಕ್ಕಮಗಳೂರಿನಲ್ಲಿ ಭತ್ತ; ಕಡೂರು ಮತ್ತು ತರೀಕೆರೆಯಲ್ಲಿ ಜೋಳ, ಎಳ್ಳು, ಹೆಸರು, ಉದ್ದು, ಗೋಧಿ, ಕೊತ್ತುಂಬರಿ, ಮತ್ತು ಹರಳು; ಎಡೇಹಳ್ಳಿ, ಮತ್ತು ಶಿಂಗೇರಿಯಲ್ಲಿ ಭತ್ತ; ಇವುಗಳು ಬಿತ್ತಲ್ಪಟ್ಟವೆ.

ಕುಯ್ಯಲಾದ ಪೈರುಗಳು ಮತ್ತು ಉತ್ಪತ್ತಿ :—

ಕಡೂರಿನಲ್ಲಿ—ಕಬ್ಬು ಉತ್ಪತ್ತಿ ಸುಮಾರು 14 ಆಣೆ.

10. ಕಾಲದ ಆಯತಿಯು ಚೆನ್ನಾಗಿದೆ. ಕಡೂರು ಮತ್ತು ತರೀಕೆರೆ, ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಮಳೆಯು ಹೆಚ್ಚಾಗಿ ಬೇಕಾಗಿ ಇದೆಯೆಂದು ರಿಪೋರ್ಟಾಗಿದೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ ಚಿಕ್ಕಮಗಳೂರಿನಲ್ಲಿಯೂ ಮತ್ತು ಅವರ ಆಜೂಬಾಜೂದಲ್ಲಿರುವ ಕೆಲವು ಗ್ರಾಮಗಳಲ್ಲಿಯೂ ಪ್ರಾಣಭಯವಿಲ್ಲದ ಪೆಡಗೂ ಇದ್ದುಕೊಂಡು ಇವೆ.

12. ದನಗಳು ಆರೋಗ್ಯವಾಗಿವೆ. ಚಿಕ್ಕಮಗಳೂರು ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಮತ್ತು ಶಿಂಗೇರಿ ಜಹಗೀರುನಲ್ಲಿಯೂ "ದೊಡ್ಡ ರೋಗವು" ಇನ್ನೂ ಇದ್ದುಕೊಂಡು ಇದೆ. ಮೈಸೂರು ದೇಶದ ಕ್ಯಾಟಲ್ ಡೀಸೀಜ್ ಇನ್ಸ್ಪೆಕ್ಟರವರಿಗೆ ಈ ವಿಷಯವಾಗಿ ಬರೆಯಲ್ಪಟ್ಟಿದೆಯೆಂದು ರಿಪೋರ್ಟಾಗಿದೆ.

ಚಿತ್ರದುರ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು ಚೆನ್ನಾಗಿದೆ.

ಬಿತ್ತನೆಯಾದ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಎಳ್ಳು, ಮತ್ತು ಜೋಳ; ಹೊಳಲ್ಕೆರೆ ಮತ್ತು ದೇವನಗೆರೆ ತಾಲ್ಲೂಕುಗಳಲ್ಲಿ ರಾಗಿ; ಜಗಲೂರು ತಾಲ್ಲೂಕಿನಲ್ಲಿ ಅರಳೆ; ದೇವನಗೆರೆ ಮತ್ತು ಹೊಸದುರ್ಗ ತಾಲ್ಲೂಕುಗಳಲ್ಲಿ ಹುರುಳಿ; ಜಗಲೂರು, ಹೊಳಕಾಲ್ಮುರು, ಹೊಸದುರ್ಗ, ಚಳ್ಳಕೆರೆ, ಈ ತಾಲ್ಲೂಕುಗಳಲ್ಲಿ ಹರಳು; ದೇವನಗೆರೆ, ಜಗಲೂರು, ಹೊಳಕಾಲ್ಮುರು, ಹೊಸದುರ್ಗ, ಈ ತಾಲ್ಲೂಕುಗಳಲ್ಲಿ ತೊಗರಿ; ಇವುಗಳು ಎಲ್ಲವು ಕಳೆದ ವಾರದಲ್ಲಿ ಬಿತ್ತಲ್ಪಟ್ಟವು.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಜುಲೈ 16ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.